# ಮರ ಕಟಾವಣೆ ಪರವಾನಗಿ ಪಡೆಯುವ ಬಗ್ಗೆ ಸಂಬಂಧಿಸಿದ ಕಾರ್ಯವಿಧಾನ

| | |
|---|---|
| ಈ ಸೇವೆ ಪಡೆಯಲು ಸಂಪರ್ಕಿಸಬೇಕಾದ ಅಧಿಕಾರಿ (ಹೆಸರಿಸಲಾದ ಅಧಿಕಾರಿ)? | ಮರ ಅಧಿಕಾರಿ. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಅಥವ ವಲಯ ಅರಣ್ಯ ಅಧಿಕಾರಿ |
| ಈ ಸೇವೆಯಲ್ಲಿ ಒಳಗೊಂಡಿರುವ ಕಾರ್ಯವಿಧಾನ | ಇಲಾಖಾ ವೆಬ್ ಸೈಟ್ ಮೂಲಕ ಸಂಪೂರ್ಣವಾಗಿ ಭರ್ತಿ ಮಾಡಲಾದ ಆನ್ ಲೈನ್ ಅರ್ಜಿಯನ್ನು ಸಂಬಂಧಪಟ್ಟ ದಾಖಲಾತಿಯೊಂದಿಗೆ ಮರ ಅಧಿಕಾರಿ ರವರಿಗೆ ಸಲ್ಲಿಸುವುದು. ತಪಾಸಣೆಯಾದ ನಂತರ ಉಪ ಅರಣ್ಯ ಸಂರಂಕ್ಷಣಾಧಿಕಾರಿಯವರು ಮರ ಕಟಾವಣೆ ಪರವಾನಗಿಯನ್ನು ಅಥವ ಅರ್ಜಿಯನ್ನು ತಿರಸ್ಕರಿಸಬಹುದು |
| ಈ ಸೇವೆ ಪಡೆಯಲು ನಿಗದಿಪಡಿಸಿರುವ ನಮೂನೆ | ನಮೂನೆ-1, ಕರ್ನಾಟಕ ಮರ ಸಂರಕ್ಷಣಾ ನಿಯಮಗಳು 1977 |
| ಈ ಸೇವೆಯನ್ನು ಪಡೆಯಲು ಇರುವ ಅರ್ಹತೆ | ಮರದ ಮೇಲೆ ಮಾಲೀಕತ್ವ ಹೊಂದಿರುವ ವ್ಯಕ್ತಿಗಳು |
| ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು | 1. ಕಂದಾಯ ಇಲಾಖೆಯಿಂದ ದೃಢೀಕರಿಸಿರುವ ಖಾತ ಪತ್ರ<br>2. ಕಂದಾಯ ಇಲಾಖೆಯಿಂದ ದೃಢೀಕರಿಸಿರುವ ಮರ ಮಾಲಿಕತ್ವ ಪತ್ರ<br>3. ಭೂ ದಾಖಲೆ ಇಲಾಖೆಯಿಂದ ದೃಢೀಕರಿಸಿರುವ ಜಮೀನಿನ ಸರ್ವೆ ನಕ್ಷೆ<br>4. ಸಹಮಾಲೀಕರಿಂದ ಪಡೆದ ನಿರಾಕ್ಷೇಪಣಾ ಪತ್ರ(ಇದ್ದಲ್ಲಿ)<br>5. ಸಾಗುವಳಿ ಪರವಾನಗಿ ಪ್ರಮಾಣಪತ್ರ (ಇದ್ದಲ್ಲಿ)<br>6. ಮರ ಗುರುತಿನ ಪಟ್ಟಿ |
| ಈ ಸೇವೆಯನ್ನು ಪಡೆಯಲು ನಿಗದಿಪಡಿಸಿರುವ ಗರಿಷ್ಟ ಕಾಲಾವಧಿ | 90 ಕೆಲಸದ ದಿನಗಳು |
| ಅಂತರಜಾಲಾ (ಆನ್ಲೈನ್ ಇದ್ದರೆ) | www.aranya.gov.in |

## ಕಾರ್ಯ ಹರಿವು

| ಹೆಜ್ಜೆ | ವಿವರಣೆ | ಹುದ್ದೆ |
|---|---|---|
| 1 | ಆನ್ ಲೈನ್ ಅರ್ಜಿಯನ್ನು ಸ್ವೀಕರಿಸುವುದು ಹಾಗೂ ಮರ ಅಧಿಕಾರಿ ಕಚೇರಿಯ ವಿಷಯ ನಿರ್ವಾಹಕರು ಮರ ಅಧಿಕಾರಿಗೆ ಮಂಡಿಸುವುದು | ವಿಷಯ ನಿರ್ವಾಹಕರು |
| 2 | ಪ್ರಕರಣದ ದಾಖಲೆಗಳನ್ನು ಪರಿಶೀಲಿಸಿ ಅರ್ಜಿದಾರರಿಂದ ಹೆಚ್ಚುವರಿ ದಾಖಲೆಗಳನ್ನು ಪಡೆಯುವ ಅವಶ್ಯಕತೆ ಇದೆಯೇ ಅಥವಾ ಇಲಾಖಾ ಸಿಬ್ಬಂದಿ ಅವಶ್ಯವೆಂದು ನಿರ್ಣಯಿಸಿದಂತೆ ವಿಚಾರಣೆಯ ಅವಶ್ಯಕತೆ ಇದೆಯೇ ಎಂಬುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳವುದು | ಮರ ಅಧಿಕಾರಿ |
| 3 | ಸ್ಥಳ ತಪಾಸಣೆ ಮತ್ತು ಸ್ಥಳೀಯ ವಿಚಾರಣೆಗೆ ಉಪ ವಲಯ ಅರಣ್ಯಾಧಿಕಾರಿಗೆ ಕಳುಹಿಸುವುದು. | ಮರ ಅಧಿಕಾರಿ |
| 4 | ಸ್ಥಳ ತಪಾಸಣೆ ಮತ್ತು ಸ್ಥಳೀಯ ವಿಚಾರಣೆ ನಂತರ ತಪಾಸಣಾ ವರದಿಯನ್ನು ಉಪ ವಲಯ ಅರಣ್ಯಾಧಿಕಾರಿ ವಲಯ ಅರಣ್ಯಾಧಿಕಾರಿಗೆ ಸಂಬಂಧಿಸಿದ ದಾಖಲಾತಿಗಳೊಡನೆ ಸಲ್ಲಿಸುವುದು. | ಉಪ ವಲಯ ಅರಣ್ಯ ಅಧಿಕಾರಿ |
| 5 | ಉಪ ವಲಯ ಅರಣ್ಯಾಧಿಕಾರಿಯ ವರದಿಯ ಸ್ವೀಕೃತಿ ಮತ್ತು ಅವಶ್ಯವಿದ್ದಲ್ಲಿ ವಲಯ ಅರಣ್ಯಾಧಿಕಾರಿಯಿಂದ ಕ್ಷೇತ್ರ ತಪಾಸಣೆ ಮತ್ತು ಸ್ಥಳೀಯ ವಿಚಾರಣೆ. | ವಲಯ ಅರಣ್ಯ ಅಧಿಕಾರಿ |
| 6 | ತಪಾಸಣಾ ವರದಿಯನ್ನು ವಲಯ ಅರಣ್ಯಾಧಿಕಾರಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗೆ ಸಂಬಂಧಿಸಿದ ದಾಖಲಾತಿಗಳೊಡನೆ ಸಲ್ಲಿಸುವುದು | ವಲಯ ಅರಣ್ಯ ಅಧಿಕಾರಿ |
| 7 | ವಲಯ ಅರಣ್ಯಾಧಿಕಾರಿಯ ವರದಿಯ ಸ್ವೀಕೃತಿ ಮತ್ತು ಅವಶ್ಯವಿದ್ದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಿಂದ ಕ್ಷೇತ್ರ ತಪಾಸಣೆ ಮತ್ತು ಸ್ಥಳೀಯ ವಿಚಾರಣೆ. | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ |
| 8 | ತಪಾಸಣಾ ವರದಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ಸಂಬಂಧಿಸಿದ ದಾಖಲಾತಿಗಳೊಡನೆ ಸಲ್ಲಿಸುವುದು | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ |

| | | |
|---|---|---|
| 9 | ವಿಭಾಗ ಕಚೇರಿಯ ವಿಷಯ ನಿರ್ವಾಹಕರು ವಿಭಾಗ ಕಚೇರಿಯ ವ್ಯವಸ್ಥಾಪಕರಿಗೆ ಆನ್ ಲೈನ್ ಅರ್ಜಿಯ ವಿವರಗಳನ್ನು ಮಂಡಿಸುವುದು | ವಿಭಾಗ ಕಚೇರಿಯ ವಿಷಯ ನಿರ್ವಾಹಕರು |
| 10 | ವಿಭಾಗ ಕಚೇರಿಯ ವ್ಯವಸ್ಥಾಪಕರು ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ಆನ್ ಲೈನ್ ಅರ್ಜಿಯ ವಿವರಗಳನ್ನು ಮಂಡಿಸುವುದು | ವಿಭಾಗ ಕಚೇರಿಯ ವ್ಯವಸ್ಥಾಪಕರು |
| 11 | ಪ್ರಕರಣವನ್ನು ಇತ್ಯರ್ಥಪಡಿಸಿ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ಅಂತಿಮ ಆದೇಶ ನೀಡುವುದು | ಉಪ ಅರಣ್ಯ ಸಂರಕ್ಷಣಾಧಿಕಾರಿ |